54

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಇವರು ನಿಯಮ 72 ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ

ಪ್ರಶ್ನೆ:-

ರಾಜ್ಯದ ರೈತರ ಹಿತದೃಷ್ಟಿಯಿಂದ ಆರ್.ಟಿ.ಸಿ ಪಡೆಯಲು ಅರ್ಜಿ ಸಲ್ಲಿಸಿದ ಒಂದು ತಿಂಗಳೊಳಗಾಗಿ ನೀಡಲು ಸರ್ಕಾರದಿಂದ ಆದೇಶವಿದ್ದರೂ, ಸರಿಯಾದ ಸಮಯಕ್ಕೆ ಆರ್.ಟಿ.ಸಿ ಯನ್ನು ನೀಡದೇ ಇರುವ ಕುರಿತು.

ಉತ್ತರ:-

ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 26 ಎಲ್‌ಜಿಪಿ 2022 ದಿನಾಂಕ: 29-09-2022 ರನ್ವಯ ನೋಟಿಸು ಸಹಿತ ಮ್ಯುಟೇಶನ್ ಪ್ರಕರಣಗಳಲ್ಲಿ 30 ದಿನಗಳ ನೋಟೀಸು ಅವಧಿಯನ್ನು ನೋಂದಾಯಿತ ದಸ್ತಾವೇಜಿಗೆ 07 ದಿನಗಳು ಹಾಗೂ ನೋಂದಾಯಿತವಲ್ಲದ ದಸ್ತಾವೇಜಿಗೆ 15 ದಿನಗಳಿಗೆ ಇಳಿಕೆ ಮಾಡಲಾಗಿದ್ದು, ರೈತರಿಗೆ ಕಾಲವಿಳಂಬವಿಲ್ಲದೇ ಸಮರ್ಪಕವಾಗಿ ಖಾತೆ ಬದಲಾವಣೆ ಮಾಡಿ ಪಹಣಿಗಳನ್ನು ಒದಗಿಸಲಾಗುತ್ತಿದೆ.

ಪ್ರಸ್ತುತ ಗಣಕೀಕೃತ ಪಹಣಿಗಳನ್ನು ತಾಲ್ಲೂಕು ಭೂಮಿ ಕೇಂದ್ರ, ಅಟಲ್ ಜೀ ಜನಸ್ನೇಹಿ ಕೇಂದ್ರ(ಎಜೆಎಸ್‌ಕೆ) ಹಾಗೂ ಇತರೆ ಎಲ್ಲಾ ಕೇಂದ್ರಗಳಲ್ಲೂ ಹಾಗೂ ಆನ್‌ಲೈನ್ ಮುಖಾಂತರವೂ ಪಡೆಯಬಹುದಾಗಿದ್ದು ಕಾಲಮಿತಿ ನಿಗಧಿಪಡಿಸಿರುವುದಿಲ್ಲ.

ಕೈಬರಹದ ಪಹಣಿಗಳನ್ನು ತಾಲ್ಲೂಕು ಕಛೇರಿ ಅಥವಾ ನಾಡಕಛೇರಿ ಅಭಿಲೇಖಾಲಯಗಳಲ್ಲಿ ಪಡೆಯಬಹುದಾಗಿದ್ದು, ಸಕಾಲ ಸೇವೆಯಡಿಯಲ್ಲಿ 7 ದಿನಗಳ ಕಾಲಮಿತಿಯನ್ನು ನಿಗಧಿಪಡಿಸಲಾಗಿದೆ.

ಸಂಖ್ಯೆ: ಕಂಇ 238 ಎಂಆರ್‌ಆರ್ 2024

(ಕೃಷ್ಣಬೈರೇಗೌಡ)
ಕಂದಾಯ ಸಚಿವರು